**<u>ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಶಶೀಲ್ ಜಿ. ನಮೋಶಿ, ಇವರು ನಿಯಮ 72ರ ಅಡಿಯಲ್ಲಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಸರ್ಕಾರದ ಉತ್ತರ</u>**

**<u>ಸೂಚನೆ:</u>**

DPAR ಇಲಾಖೆಯ ನಿಯಮಗಳಿಗೆ ಸಂಬಂಧಿಸಿದಂತೆ, KSCS RPP ACT 1973 ಅಧಿನಿಯಮ ಮತ್ತು ಅದರಡಿ ಹೊರಡಿಸಲಾಗಿರುವ ನಿಯಮಗಳು ಅನುಚ್ಛೇದ 371 (J) ರಡಿ ರಚಿಸಲಾಗಿರುವ ಸ್ಥಳೀಯ ವೃಂದದ ಹುದ್ದೆಗಳಿಗೂ ಅನ್ವಯಿಸುವುದರಿಂದ, ಸದರಿ ಅಧಿನಿಯಮ ಸೆಕ್ಷನ್ 4 ರಲ್ಲಿ ಬಡ್ತಿಗಳು ಇತ್ಯಾದಿ ಹಂಚಿಕೆದಾರರು ಇದರಡಿ ಹುದ್ದೆಗಳಿಗೆ ಕಾಲ್ಪನಿಕ ಜೇಷ್ಠತೆ ನೀಡಿ ಹುದ್ದೆಗಳ ಹಂಚಿಕೆಯ ಸಂದರ್ಭಗಳ ಬಗ್ಗೆ ವಿವರಿಸಿದಂತೆ, ಸದರಿ ನಿಯಮದಂತೆ (ಸೆಕ್ಷನ್ 4 ರಡಿ) ಕಲ್ಯಾಣ ಕರ್ನಾಟಕದ ನೌಕರರ ಹುದ್ದೆಗಳ ಲಭ್ಯತೆ ಇದ್ದರೂ, ಆಡಳಿತ ಇಲಾಖೆಗಳು ಈ ಹುದ್ದೆಗಳನ್ನು ಹಂಚಿಕೆ (Allocation) ಅನುಷ್ಠಾನ ಮಾಡದೇ ಇದ್ದಾಗ ಮೇಲಿನ ನಿಯಮದಡಿ ಅರ್ಹತೆ ಹೊಂದಿದ ದಿನಾಂಕದಿಂದ ಅಥವಾ ಇಲಾಖೆಯಲ್ಲಿ 371(J) ನಿಯಮಾನುಸಾರ ಮೊದಲ ಬಾರಿಗೆ ವೃಂದಗಳ ವಿಭಜನೆಯಾಗಿ ನಾನ್ HK ಕೇಡರ್ ಗೆ ನೀಡಿದ ಮುಂಬಡ್ತಿಯ ದಿನಾಂಕಗಳಿಗೆ ಅನುಗುಣವಾಗಿ ಕಾಲ್ಪನಿಕ ಜೇಷ್ಠತೆ ನೀಡಿ 371(J) ವೃಂದದ ಹುದ್ದೆಗಳನ್ನು ಮರು ಹಂಚಿಕೆಯನ್ನು ಮಾಡಬಹುದೇ ಎಂಬುವುದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನ ಸೆಳೆಯಬಯಸುತ್ತೇನೆ.

**<u>ಉತ್ತರ:</u>**

KARNATAKA STATE CIVIL SERVICES (REGULATION OF PROMOTION, PAY AND PENSION ACT, 1973ರ ಸೆಕ್ಷನ್ 3 ರನ್ವಯ, ಈ ಅಧಿನಿಯಮದಡಿ ರಚಿಸಲಾದ ನಿಯಮಗಳಲ್ಲಿ ನಿರ್ದಿಷ್ಟಪಡಿಸಲಾದ ಸಂದರ್ಭಗಳನ್ನು ಹೊರತುಪಡಿಸಿ ಉಳಿದ ಸಂದರ್ಭಗಳಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳಿಗೆ ಮಾಡುವ ಮುಂಬಡ್ತಿಗಳು ಭವಿಷ್ಯವರ್ತಿಯಾಗಿ ಜಾರಿಗೆ ಬರುತ್ತವೆ.

ಮೇಲಿನ ಅಧಿನಿಯಮದಡಿ ರಚಿಸಲಾಗಿರುವ THE KARNATAKA STATE CIVIL SERVICES (REGULATION OF PROMOTION, PAY AND PENSION) RULES, 1978ರ ನಿಯಮ 2ರಲ್ಲಿ ಪೂರ್ವಾನ್ವಯ ಮುಂಬಡ್ತಿ ನೀಡುವ ಸಂದರ್ಭಗಳನ್ನು ವಿವರಿಸಲಾಗಿದ್ದು, ಕೆಳಗಿನಂತಿರುತ್ತವೆ:-

1. ಬಡ್ತಿಗೆ ಸಂಬಂಧಿಸಿದಂತೆ ಆತನ ಕ್ಲೇಮನ್ನು

   (ಎ) ಆತನ ವಿರುದ್ಧ ಬಾಕಿ ಇದ್ದ ಶಿಸ್ತು ವ್ಯವಹರಣೆಗಳ ಅಥವಾ ಕ್ರಿಮಿನಲ್ ಅಭಿಯೋಜನೆಯ ಅಥವಾ ಇವೆರಡರ ಕಾರಣದಿಂದ ತಡೆಹಿಡಿಯಲಾಗಿದ್ದು ಮತ್ತು ತರುವಾಯ ಆತನನ್ನು ದೋಷಮುಕ್ತಗೊಳಿಸಿದ್ದರೆ ಅಥವಾ ನಿರ್ದೋಷಿಯೆಂದು ಖುಲಾಸೆ ಮಾಡಿದ್ದರೆ; ಅಥವಾ)]

   (ಬಿ) ಆತ ಬೇರೊಂದು ಇಲಾಖೆಯಲ್ಲಿ ಪ್ರತಿನಿಯೋಜನೆಯ ಮೇಲೆ ಕೆಲಸ ಮಾಡುತ್ತಿದ್ದನೆಂಬ ಕಾರಣದಿಂದ ಅಥವಾ ಅನ್ಯಥಾ ಪರಿಗಣಿಸಿರದಿದ್ದರೆ; ಅಥವಾ

   (ಸಿ) ಅಂತಿಮ ಜೇಷ್ಠತಾ ಪಟ್ಟಿಯಲ್ಲಿ ತಪ್ಪಾಗಿ ಅಥವಾ ದೋಷಯುಕ್ತವಾಗಿ ಸೂಚಿಸಲಾಗಿದೆ ಎಂಬ ಕಾರಣದಿಂದ ಪರಿಗಣಿಸಿರದಿದ್ದರೆ:

   (ಡಿ) ಆತನ ರಹಸ್ಯ ವರದಿಗಳಲ್ಲಿ ದಾಖಲಾಗಿದ್ದ ಪ್ರತಿಕೂಲ ಷರಾಗಳ ಕಾರಣದಿಂದ ಗಣನೆಗೆ ತೆಗೆದುಕೊಂಡಿರದಿದ್ದರೆ ಹಾಗೂ ತರುವಾಯ ಆ ಷರಾಗಳನ್ನು ತೆಗೆದುಹಾಕಿದ್ದರೆ;

2. ಜೇಷ್ಠತಾ ಪಟ್ಟಿ ಅಥವಾ ತಾತ್ಕಾಲಿಕ ಅಂತರರಾಜ್ಯ ಜೇಷ್ಠತಾಪಟ್ಟಿ ಅಥವಾ ಅಂತಿಮವಾದುದಲ್ಲದ ಯಾವುದೇ ಇತರ ಅಂತರರಾಜ್ಯ ಜೇಷ್ಠತಾ ಪಟ್ಟಿಯನ್ನು ಪ್ರವರ್ತನೆಗೊಳಿಸುವಾಗ ಸಮರ್ಥನೀಯವಲ್ಲದ ಕಾರಣದಿಂದ ಬಡ್ತಿ ನೀಡುವುದಕ್ಕೆ ಆತನನ್ನು ಪರಿಗಣಿಸಿರದಿದ್ದರೆ;

3. ಚಾಲ್ತಿಯಲ್ಲಿದ್ದ ಪಟ್ಟಿಯಲ್ಲಿನ ಆತನ ಜೇಷ್ಠತೆಗನುಸಾರವಾಗಿ ಅರ್ಹತೆ ಹೊಂದಿದ್ದರೆ ಮತ್ತು ವೃಂದ ಮತ್ತು ನೇಮಕಾತಿ ನಿಯಮಗಳಿಗನುಸಾರ ಬಡ್ತಿಗೆ ಅನ್ಯಥಾ ಅರ್ಹನಾಗಿದ್ದರೆ- ಸಕ್ಷಮ ಪ್ರಾಧಿಕಾರಿಯು ಅವನನ್ನು ಹುದ್ದೆಯ ಸ್ವತಂತ್ರ ಪ್ರಭಾರದಲ್ಲಿ ಮಾತ್ರ ಇರಿಸಿದ್ದರೆ ಮತ್ತು ಆತನು ಸದರಿ ಹುದ್ದೆಯ ಕರ್ತವ್ಯಗಳನ್ನು ನಿರ್ವಹಿಸಿದ್ದರೆ ಒಂದು ಪೂರ್ವಾನ್ವಯ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಬಡ್ತಿ ನೀಡಬಹುದು.

ಕರ್ನಾಟಕ ರಾಜ್ಯ ಸಿವಿಲ್ ಸೇವಾ (ಮುಂಬಡ್ತಿ ವೇತನ ಮತ್ತು ಪಿಂಚಣಿ ಕ್ರಮಬದ್ಧತೆ) ಅಧಿನಿಯಮ, 1973ರ ಸೆಕ್ಷನ್ 4ರನ್ವಯ ರಾಜ್ಯ ಸಿವಿಲ್ ಸೇವೆಯ ಯಾವುದೇ ವರ್ಗದ ಹುದ್ದೆಯಿಂದ ಸೇವೆಯ ಮುಂದಿನ ಉನ್ನತ ವರ್ಗಕ್ಕೆ ಅಥವಾ ದರ್ಜೆಗೆ ನೀಡುವ ಮುಂಬಡ್ತಿ ಸಂದರ್ಭದಲ್ಲಿ ಜೇಷ್ಠತೆಯಲ್ಲಿನ ವ್ಯತ್ಯಾಸದ ಹಿನ್ನಲೆಯಲ್ಲಿ ಜೇಷ್ಠತೆಯಲ್ಲಿ ಹಿರಿಯ ನೌಕರರನ್ನು ಪರಿಗಣನೆಗೆ ತೆಗೆದುಕೊಳ್ಳದೆ ಜೇಷ್ಠತೆಯಲ್ಲಿ ನಿಕಟ ಕಿರಿಯ ನೌಕರರಿಗೆ ಮುಂಬಡ್ತಿ ನೀಡಿದರೆ, ನಿಕಟ ಕಿರಿಯ ನೌಕರನು ಸೇವೆಯ ಮುಂದಿನ ಹುದ್ದೆಗೆ ಮುಂಬಡ್ತಿ ಹೊಂದಿದ ದಿನಾಂಕದಿಂದ ಜೇಷ್ಠತೆಯಲ್ಲಿ ಹಿರಿಯ ನೌಕರನು ಸದರಿ ಹುದ್ದೆಯನ್ನು ಹೊಂದಿರುತ್ತಾನೆಂದು ಪರಿಗಣಿಸಿ ಸದರಿ ಹುದ್ದೆಗೆ ವಾಸ್ತವವಾಗಿ ಮುಂಬಡ್ತಿ ಹೊಂದಿದ ದಿನಾಂಕದಿಂದ ವೇತನಕ್ಕೆ ಅರ್ಹತೆಯನ್ನು ಹೊಂದಿರುತ್ತಾರೆ. ಆದರೆ, ಅವನು ವಾಸ್ತವವಾಗಿ ಬಡ್ತಿಯನ್ನು ಪಡೆದ ದಿನಾಂಕದಿಂದ ಹಿಂದಿನ ಅವಧಿಗೆ ಯಾವುದೇ ಬಾಕಿ ಸಂದಾಯಕ್ಕೆ ಹಕ್ಕುಳ್ಳವನಾಗಿರತಕ್ಕದ್ದಲ್ಲ.

ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್ ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ, 2013ರ ಕಂಡಿಕೆ 5(1)ರಲ್ಲಿ The region for which local cadre has been organized in respect of any category of posts, shall be a separate unit for the purposes of recruitment, appointment, seniority, promotion and transfer and such other matters as may be specified by the State Government in respect of that category of posts ಎಂದಿರುತ್ತದೆ. ಸದರಿ ಆದೇಶದಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಸ್ಥಳೀಯ ವೃಂದಗಳ ರಚನೆ, ಹಂಚಿಕೆ ಮತ್ತು ವ್ಯಕ್ತಿಗಳ ವರ್ಗಾವಣೆ) ನಿಯಮ 2013ನ್ನು ಹೊರಡಿಸಲಾಗಿದ್ದು, ಸದರಿ ನಿಯಮಗಳ ನಿಯಮ 7(1)ರಲ್ಲಿ The Competent Authority shall maintain separate seniority, in each local cadre and Residuary Parent Cadre ಎಂದು ತಿಳಿಸಲಾಗಿರುತ್ತದೆ. ಮೇಲಿನ ನಿಯಮಗಳಂತೆ ಸ್ಥಳೀಯ ಮತ್ತು ಮಿಕ್ಕುಳಿದ ವೃಂದಗಳು ಜೇಷ್ಠತೆಗೆ ಸಂಬಂಧಿಸಿದಂತೆ ಪ್ರತ್ಯೇಕ ಘಟಕಗಳಾಗಿರುತ್ತವೆ.

ಸಕ್ಷಮ ಪ್ರಾಧಿಕಾರಗಳು ಪ್ರತ್ಯೇಕ ಜೇಷ್ಠತಾ ಪಟ್ಟಿಗಳನ್ನು ಸ್ಥಳೀಯ ವೃಂದ ಮತ್ತು ಮಿಕ್ಕುಳಿದ ವೃಂದಗಳಲ್ಲಿ ತಯಾರಿಸಿದ ತರುವಾಯ ಪ್ರತಿ ವೃಂದದಲ್ಲಿ ನೀಡುವ ಮುಂಬಡ್ತಿಯು ಆಯಾ ವೃಂದಗಳಲ್ಲಿ ಲಭ್ಯವಿರುವ ರಿಕ್ತ ಸ್ಥಾನಗಳನ್ನು ಅವಲಂಬಿಸಿರುತ್ತದೆ. ಈ ಹಿನ್ನಲೆಯಲ್ಲಿ ಮತ್ತೊಂದು ವೃಂದದಲ್ಲಿ ಜೇಷ್ಠತೆಯಲ್ಲಿ ಕಿರಿಯ ವ್ಯಕ್ತಿಯು ಮುಂಬಡ್ತಿ ಹೊಂದಿದಲ್ಲಿ THE KARNATAKA STATE CIVIL SERVICES (REGULATION OF PROMOTION, PAY AND PENSION) ACT, 1973ರ ಸೆಕ್ಷನ್ 4ರನ್ವಯ ಕಾಲ್ಪನಿಕವಾಗಿ ಅರ್ಹತಾ ದಿನಾಂಕವನ್ನು ನಿಗಧಿಪಡಿಸಿ ಜೇಷ್ಠತೆ ನೀಡಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

**ಸಂಖ್ಯೆ: ಸಿಆಸುಇ 18 ಹೈಕಕೋ 2026**

(ಸಿದ್ಧರಾಮಯ್ಯ)
ಮುಖ್ಯಮಂತ್ರಿ